# ನಿಮ್ಮೊಡನೆ

## ಸ್ಯಾಂಡಲ್‌ವುಡ್‌ನಲ್ಲಿ ದುರ್ಗಂಧ

ಕನ್ನಡ ಚಿತ್ರರಂಗಕ್ಕೆ 'ಸ್ಯಾಂಡಲ್‌ವುಡ್' ಎಂಬ ಹೆಸರು ಅದ್ಯಾರು ಇಟ್ಟರೋ ಗೊತ್ತಿಲ್ಲ, ಹೆಸರು ಮಾತ್ರ ತುಂಬ ಅರ್ಥಗರ್ಭಿತ ಹಾಗೂ ಹೃದಯಂಗಮವಾಗಿದೆ. ಇಂಗ್ಲಿಷಿನ ಹಾಲಿವುಡ್ ಮಾದರಿಯಲ್ಲೇ ಹಿಂದಿಯನ್ನು ಬಾಲಿವುಡ್, ತೆಲುಗನ್ನು ಟಾಲಿವುಡ್ ಹಾಗೂ ತಮಿಳನ್ನು ಕೋಳಿವುಡ್ ಎಂದವರು, ಕನ್ನಡಕ್ಕೆ ಮಾತ್ರ ತುಂಬ ಚೆಂದದ, ಗಂಧದ ಪರಿಮಳವನ್ನು ಸೂಸುವ ಸ್ಯಾಂಡಲ್‌ವುಡ್ ಎಂಬ ಹೆಸರು ಕೊಟ್ಟಿದ್ದಾರೆ. ಆದರೆ ಕನ್ನಡ ಚಿತ್ರರಂಗದ ಇತ್ತೀಚಿನ ಕೋಳಿಜಗಳಗಳನ್ನು ಗಮನಿಸಿದರೆ ಇಲ್ಲಿ ಗಂಧದ ಪರಿಮಳ ಸೂಸುವುದೇ ಅಪರೂಪವಾಗಿದೆ. ಬದಲಾಗಿ ಸ್ವಾರ್ಥ ಹಾಗೂ ಪರನಿಂದನೆಯ ದುರ್ಗಂಧವನ್ನು ಸೂಸುವ ಒಳಜಗಳಗಳೇ ಜಾಸ್ತಿಯಾಗಿವೆ. ದೊಡ್ಡ ಬ್ಯಾನರಿನ ಎರಡು ಮೂರು ಕನ್ನಡ ಚಿತ್ರಗಳು ಬಿಡುಗಡೆಯಾಗುವ ಸಂದರ್ಭ ಬಂದಾಗಲೆಲ್ಲ ಗಾಂಧಿನಗರದಲ್ಲಿ ಪರಸ್ಪರ ಕೆಸರೆರಚಾಟ, ಬೈದಾಟಗಳು ಮಾಮೂಲು ಎಂಬಂತಾಗಿದೆ.

ಪರಸ್ಪರ ಸಿನಿಮಾಗಳ ನಡುವಣ ಪೈಪೋಟಿ ಅದರ ಕಥೆ, ಚಿತ್ರಕಥೆ ಮತ್ತು ಸಂದೇಶಗಳ ಹಿನ್ನೆಲೆಯಲ್ಲಿ ನಡೆದಿದ್ದರೆ; ಈ ಜಗಳಗಳಿಗೆ ಯಾವುದಾದರೂ ಸೈದ್ಧಾಂತಿಕ ಭಿನ್ನಮತ ಅಥವಾ ಸಿನಿಮಾ ಕುರಿತ ಸಾಂಸ್ಕೃತಿಕ ವ್ಯಾಖ್ಯಾನದ ಅರ್ಥ ವ್ಯತ್ಯಾಸಗಳು ಕಾರಣವಾಗಿದ್ದರೆ ಅದು ನಿಜಕ್ಕೂ ಸಂತೋಷದ ಸಂಗತಿಯೇ ಎನ್ನಬಹುದಿತ್ತು. ಅದರಿಂದ ಕನ್ನಡದ ಸಿನಿಮಾ ಸಂಸ್ಕೃತಿಯ ಬೆಳವಣಿಗೆಗೆ ಅರ್ಥಪೂರ್ಣ ಕೊಡುಗೆಯಾದರೂ ಸಿಗುತ್ತಿತ್ತು. ಆದರೆ ಈಗ ನಡೆಯುತ್ತಿರುವ ಕೋಳಿಜಗಳಗಳಿಗೆ ಪರಸ್ಪರ ವ್ಯಾಪಾರಿ ಹಿತಾಸಕ್ತಿಗಳನ್ನು ಬಿಟ್ಟರೆ ಇನ್ಯಾವ ಕಾರಣಗಳೂ ಗೋಚರಿಸುತ್ತಿಲ್ಲ. ವೈಯಕ್ತಿಕ ಮೇಲಾಟ, ವ್ಯಾಪಾರಿ ಮನೋಭಾವ, ಲಾಭಕೋರತನ, ಪರಸ್ಪರ ಕಾಲೆಳೆಯುವ ತಂತ್ರಗಾರಿಕೆ– ಇವೆಲ್ಲವೂ ಸೇರಿ ಈ ಜಗಳಗಳು ರೂಪುಗೊಳ್ಳುತ್ತಿವೆ. ಇಂತಹ ಜಗಳಗಳನ್ನು ಬಗೆಹರಿಸಲು ಉದ್ಯಮದ್ದೇ ಆದ ವ್ಯವಸ್ಥೆ ಇದ್ದರೂ, ಅದರ ಪ್ರವೇಶಕ್ಕೂ ಮುನ್ನವೇ ಮಾಧ್ಯಮಗಳ ಮೂಲಕ ಕೆಸರೆರಚಾಟ ನಡೆಯುತ್ತದೆ. ದೃಶ್ಯಮಾಧ್ಯಮಗಳಲ್ಲಂತೂ 'ಕನ್ನಡ ಚಿತ್ರರಂಗದ ಅತ್ಯಂತ ದೊಡ್ಡ ಸಮಸ್ಯೆ ಇದೇ' ಎಂಬಂತೆ ಚರ್ಚೆಗಳು ನಡೆಯುತ್ತವೆ. ಈ ಚರ್ಚೆಗಳು ಎಷ್ಟೋ ಸಲ ಸಭ್ಯತೆಯ ಎಲ್ಲೆಯನ್ನೂ ಮೀರಿ ವೈಯಕ್ತಿಕ ತೇಜೋವಧೆಗಳ ಮಟ್ಟಕ್ಕೆ ಇಳಿದುಬಿಡುತ್ತಿವೆ. ಈ ವೃಥಾ ಚರ್ಚೆಯಿಂದ ಕನ್ನಡ ಚಿತ್ರರಂಗಕ್ಕೆ ಯಾವುದಾದರೂ ಅನುಕೂಲವಾಗುವುದು ಬಿಡಿ, ಇರುವ ಮನುಷ್ಯ ಸಂಬಂಧಗಳೂ ಕುಲಗೆಟ್ಟು ಪರಸ್ಪರ ಅಪನಂಬಿಕೆಯ ವಾತಾವರಣ ಇನ್ನಷ್ಟು ಗಾಢವಾಗುತ್ತದೆ.

ಉಪೇಂದ್ರ ಅಭಿನಯಿಸಿದ 'ಗಾಡ್‌ಫಾದರ್' ಮತ್ತು 'ಕಠಾರಿವೀರ....' ಚಿತ್ರಗಳ ಬಿಡುಗಡೆ ದಿನಾಂಕಕ್ಕಾಗಿ ನಿರ್ಮಾಪಕರಾದ ಕೆ.ಮಂಜು ಮತ್ತು ಮುನಿರತ್ನಂ ಮಧ್ಯೆ ನಡೆದ ವಿವಾದ ಸದ್ಯಕ್ಕೆ ಬಗೆಹರಿದಿದೆ. ಈ ಮಧ್ಯೆ ಕನ್ನಡದ ಇನ್ನೊಂದು ಅದ್ದೂರಿ ಚಿತ್ರ 'ಅಣ್ಣಾ ಬಾಂಡ್' ಸ್ಪರ್ಧೆಯ ಕುರಿತೂ ಚರ್ಚೆಯಾಗಿದೆ. 'ಪರಿ' ಎನ್ನುವ ಚಿತ್ರ ಬಿಡುಗಡೆಯಾಗಿ ಒಂದು ವಾರವನ್ನೂ ಪೂರೈಸದಂತೆ ಥಿಯೇಟರ್‌ಗಳ ಕೊರತೆ ಉಂಟಾಗಿದೆ. ಕನ್ನಡದ ನಿರ್ಮಾಪಕರು ಹೀಗೆ ಕೋಳಿಜಗಳದಲ್ಲಿ ತೊಡಗಿದ್ದರೆ, ಇನ್ನೊಂದೆಡೆ ತಮಿಳು ಮತ್ತು ತೆಲುಗಿನ ಎರಡು ಬಿಗ್ ಬಜೆಟ್ ಚಿತ್ರಗಳು ಸ್ಪರ್ಧೆಯ ಅಳುಕೂ ಇಲ್ಲದಂತೆ, ನೂರಾರು ಚಿತ್ರಮಂದಿರಗಳಲ್ಲಿ ಪ್ರದರ್ಶನ ಕಂಡು ಹಣ ದೋಚಿವೆ!

ಒಂದೇ ವಾರದಲ್ಲಿ ಎರಡು ಕನ್ನಡ ಚಿತ್ರಗಳು ಪ್ರದರ್ಶನಗೊಂಡರೆ ಎರಡೂ ಚಿತ್ರಗಳ ಕಲೆಕ್ಷನ್ ಬಿದ್ದು ಹೋಗುತ್ತದೆ ಎನ್ನುವುದು ಕನ್ನಡ ನಿರ್ಮಾಪಕರ ಅನಿಸಿಕೆ. ಅಂದರೆ ಅವರಿಗೆ ತಮ್ಮ ಸಿನಿಮಾಗಳ ಸಾಮರ್ಥ್ಯದ ಬಗ್ಗೆಯೇ ನಂಬಿಕೆಯಿಲ್ಲ! ಒಳ್ಳೆಯ ಚಿತ್ರಕಥೆ, ಉತ್ತಮ ನಿರ್ದೇಶನ, ಮನ ಗೆಲ್ಲುವ ಸಂಗೀತ, ಛಾಯಾಗ್ರಹಣ ಇದ್ದ ಯಾವ ಕನ್ನಡ ಸಿನಿಮಾಗಳನ್ನೂ ನಮ್ಮ ಪ್ರೇಕ್ಷಕರು ತಿರಸ್ಕರಿಸಿಲ್ಲ. ಇದ್ಯಾವುದೂ ಇಲ್ಲದೆ ಕೇವಲ ಗಿಮಿಕ್‌ಗಳಿಂದ ಚಿತ್ರಗಳನ್ನು ಗೆಲ್ಲಿಸಬೇಕಾದ ಅಗತ್ಯ ಇವತ್ತಿನ ಕನ್ನಡ ನಿರ್ಮಾಪಕರಿಗೆ ಏಕೆ ಉಂಟಾಗಿದೆ? ಹಳೇ ಸಿನಿಮಾಗಳನ್ನು ಹೊಸ ರೀತಿಯಲ್ಲಿ ನಕಲು ಮಾಡಿ, ಅವು ಮಾರುಕಟ್ಟೆಯಲ್ಲಿ ಮುಗ್ಗರಿಸಿದಾಗ 'ಪ್ರೇಕ್ಷಕರಿಗೆ ಕನ್ನಡಾಭಿಮಾನವಿಲ್ಲ' ಎಂದು ಗೋಳಾಡುವುದು ನಡೆದೇ ಇದೆ. ಪದೇ ಪದೇ ಮಾಧ್ಯಮಗಳ ಮುಂದೆ ತಮ್ಮ ಸಿನಿಮಾಗಳ ಬಗ್ಗೆ ಕೊಚ್ಚಿಕೊಂಡು ಪ್ರಚಾರದ ತೆವಲಿನಲ್ಲಿ ಪ್ರೇಕ್ಷಕರಲ್ಲಿ ವಿಪರೀತ ನಿರೀಕ್ಷೆಯ ಭಾರ ಹುಟ್ಟಿಸಿ, ಕೊನೆಗೆ ಪ್ರೇಕ್ಷಕರಿಗೆ 'ಇದೊಂದು ಸಾಮಾನ್ಯ ಚಿತ್ರ' ಎನ್ನಿಸುವಂತಾಗಲೂ ನಿರ್ಮಾಪಕರೇ ಕಾರಣರಾಗುತ್ತಾರೆ.

ಈ ಎಲ್ಲ ಸಂದರ್ಭದಲ್ಲೂ 'ಕನ್ನಡ ಚಿತ್ರರಂಗಕ್ಕೆ ಇವತ್ತು ನಾಯಕತ್ವದ ಕೊರತೆ ಕಾಡುತ್ತಿದೆ' ಎನ್ನುವುದು ಖಚಿತವಾಗುತ್ತಿದೆ. ಅದಕ್ಕೆಂದೇ ಡಾ.ರಾಜ್‌ಕುಮಾರ್ ಪದೇ ಪದೇ ನೆನಪಾಗುತ್ತಾರೆ. ಇನ್ನೊಬ್ಬ ರಾಜ್‌ಕುಮಾರ್ ಹುಟ್ಟಿಬರಲು ಸಾಧ್ಯವಿಲ್ಲ. ಆದರೆ ನಾಯಕತ್ವ ಎಂದರೆ ಅದು ಒಬ್ಬ ವ್ಯಕ್ತಿಯದ್ದೇ ಆಗಬೇಕಿಲ್ಲ; ಕೆಲವು ಮೌಲ್ಯಗಳನ್ನು ನಂಬಿಕೊಂಡವರ ಸಾಮೂಹಿಕ ನಾಯಕತ್ವವಾದರೂ ನಡೆದೀತು ಎನ್ನುವ ಅರಿವೂ ನಮ್ಮ ಸಿನಿಮಾ ಮಂದಿಗೆ ಇದ್ದಂತಿಲ್ಲ. ಈ ಕೋಳಿಜಗಳದಲ್ಲಿ ಮಾರುಕಟ್ಟೆಯ ಒತ್ತಡಗಳನ್ನು ನಿರ್ಲಕ್ಷಿಸಿ ಕನ್ನಡ ಸಾಹಿತ್ಯ, ಸಂಸ್ಕೃತಿಯ ಸುಗಂಧವನ್ನು ಸೂಸುವ ಚಿತ್ರಗಳ ನಿರ್ಮಾಪಕರೂ ಥಿಯೇಟರ್ ಸಿಗದೆ ಅತಂತ್ರರಾಗಿರುವುದು ಕನ್ನಡದ ದೌರ್ಭಾಗ್ಯವೇ ಸರಿ.

■ ಬಿ.ಎಂ.ಹನೀಫ್

'ನಾಯಕತ್ವ ಎಂದರೆ ಅದು ಒಬ್ಬ ವ್ಯಕ್ತಿಯದ್ದೇ ಆಗಬೇಕಿಲ್ಲ; ಕೆಲವು ಮೌಲ್ಯಗಳನ್ನು ನಂಬಿಕೊಂಡವರ ಸಾಮೂಹಿಕ ನಾಯಕತ್ವವಾದರೂ ನಡೆದೀತು' ಎನ್ನುವ ಅರಿವೂ ನಮ್ಮ ಸಿನಿಮಾ ಮಂದಿಗೆ ಇದ್ದಂತಿಲ್ಲ.

